ಮೂಡುಸೀಮೆಯ ಎಡೂರುಮಂಗಲ ಗ್ರಾಮದ ನಿವೃತ್ತ ಶಿಕ್ಷಕ ಸದಾನಂದಯ್ಯನವರು ಗದುಗಿನ ಭಾರತ, ಹರಿಶ್ಚಂದ್ರ ಕಾವ್ಯ, ಗೋವಿನ ಕತೆಯ ಪುಸ್ತಕದ ಚೀಲವನ್ನು ಮೇಜಿನ ಮೇಲಿರಿಸುತ್ತ, 'ಅನ್ನ, ಇವತ್ತು ಏನಾಯ್ತು ಗೊತ್ತಾ...' ಎಂದರು. ಅನ್ನಪೂರ್ಣಮ್ಮನವರು, 'ಹೇಳಿದರೆ ತಾನೆ ಕತೆ ಗೊತ್ತಾಗುವುದು' ಎಂದರು.

'ಇವತ್ತು ನಾನು ಕೃಷ್ಣಾಪುರದ ಗುಡಿಯಲ್ಲಿ ಓದಿ ವ್ಯಾಖ್ಯಾನ ಮಾಡಿದ್ದು, ಸೌಗಂಧಿಕ ಪುಷ್ಪ ತರಲು ಭೀಮ ಹೋಗುತ್ತಾನಲ್ಲ ಅದು. ಆಹಾ... ಕತೆಯಲ್ಲಿ ಸಹೋದರರಿಬ್ಬರ ಭೇಟಿ, ಮಾತುಕತೆ, ಹಿರಿಯಣ್ಣನ ದರ್ಶನ ಏನಂತೀಯಾ, ಗ್ರಾಮಸ್ಥರ ಕಣ್ಣಲ್ಲಿ ನೀರು...'

'ಅದು ಸರಿ, ದ್ರೌಪದಿಗೆ ಭೀಮ ಸೌಗಂಧಿಕ ಪುಷ್ಪ ತಂದುಕೊಟ್ಟ. ನೀವು ತಂದದ್ದೇನು?'

ಸದಾನಂದಯ್ಯನವರು ಭಕ್ತರು ಕೊಟ್ಟಿದ್ದ ಫಲಪುಷ್ಪದ ಬುಟ್ಟಿಯನ್ನು ಪತ್ನಿಯ ಕೈಗಿಡುತ್ತ, 'ಇಕಾ ಇದೇ ಸೌಗಂಧಿಕ ಅಂತ ತಿಳಕೋ' ಅಂದರು. ನಿತ್ಯ ಮೊಮ್ಮಗಳನ್ನು ಕುರಿತು ಕೇಳುವಂತೆ 'ಪೂರ್ವಿ ಶಾಲೆಯಿಂದ ಬಂದಳಾ' ಅಂದರು.

ಸದಾನಂದಯ್ಯನವರ ಮಗ ಸಮೀರಕುಮಾರ ಓದಿದ್ದು ಎಡೂರುಮಂಗಲದಲ್ಲೇ. ಎಂಜಿನಿಯರಿಂಗ್ ಬೆಂಗಳೂರಿನಲ್ಲಿ. ಮದುವೆಯೂ ಅಲ್ಲಿಯೇ. ಒಂದೇ ವರ್ಷಕ್ಕೆ ಹುಟ್ಟಿದ ಪೂರ್ವಿಯನ್ನು ಎಡೂರು ಮಂಗಲದಲ್ಲಿಯೇ ಬಿಟ್ಟಿದ್ದ. ತನ್ನ ಭವಿಷ್ಯ ಅಮೆರಿಕಾದಲ್ಲೋ, ವಾಪಸು ಬರುವಂತಾಗಿ ಬೆಂಗಳೂರಿನ ಕಂಪನಿಯಲ್ಲೋ ಎಂಬ ದ್ವಂದ್ವದಲ್ಲಿ ಸಮೀರ ಸದ್ಯಕ್ಕೆ ಪೂರ್ವಿ ಮಂಗಲದಲ್ಲೇ ಅಜ್ಜ ಅಜ್ಜಿಯ ಕಣ್ಣ ಮುಂದಿರಲಿ ಅಂದು ಹೆಂಡತಿಯೊಡನೆ ಅಮೆರಿಕಾ ಸೇರಿದ್ದ. ಪೂರ್ವಿಗೆ ಈಗ ಎಂಟು ವರ್ಷ.

ಸದಾನಂದಯ್ಯನವರು ಪುಸ್ತಕವಿಟ್ಟ ಟೇಬಲಿನ ಮೇಲೆಯೇ ಇದ್ದ ದೂರವಾಣಿಯ ಸದ್ದಾಯಿತು. ಯಾಕೋ ಮೋಡ ಕಟ್ಟುತ್ತಿದೆ ಅನ್ನುತ್ತ ಆಚೆ ಹಪ್ಪಳ ಸಂಡಿಗೆ ಆರಲು ಹಾಕಿದ್ದ ಬಟ್ಟೆಯನ್ನು ಅದರ ಕೆಳಗಿನ ಚಾಪೆಯನ್ನು ಎತ್ತುತ್ತಿದ್ದ ಅನ್ನಪೂರ್ಣಮ್ಮನವರು, ಸಮ್ಮಿ ಅಮೆರಿಕಾದಿಂದ ಯಾವಾಗ ಬರುವನೋ ಅಂದುಕೊಳ್ಳುವಲ್ಲಿ ಅವನೇ ದೂರವಾಣಿ ಮಾಡಿಬಿಟ್ಟನಲ್ಲ ಅಂದು ರೂಢಿಯಂತೆ ಯಜಮಾನರಿಗೆ ಫೋನ್ ಬಂತು ನೋಡಿ ಅವನದೇ ಇರಬೇಕೆಂದರು.

ರಿಸೀವರ್ ಕಿವಿಗೆ ಇಟ್ಟ ಸದಾನಂದಯ್ಯ ಸಮೀರನಿಗೆ, 'ಹದಿನೈದು ದಿನವಾಯಿತಲ್ಲಯ್ಯ ನೀನು ದೂರವಾಣಿ ಮಾಡಿ' ಅಂದರು. ಇದೀಗ ತಂದೆ ಆಡಿದ್ದ ಮಾತನ್ನೇ ಸಮೀರ ಪುನರಾವರ್ತನೆಯಂತೆ, 'ಏನಾಯ್ತು ಗೊತ್ತ ಡ್ಯಾಡಿ' ಎಂದ. ಅವನ ದನಿಯಲ್ಲಿ ಆತಂಕವಿದ್ದುದರಿಂದ, ಹುಷಾರು ತಾನೇ ಅಂದರು.

'ನಾನು ಹುಷಾರೇ. ಈ ಅಮೆರಿಕಾದ ಸುಪ್ರಸಿದ್ಧ ಮಿಷಿಗನ್ ಸರೋವರದಿಂದ ನೂರು ಮೈಲಿ ದೂರದ ಸಟಿನ್ಸ್‌ಬೇನಲ್ಲಿದ್ದೇನಲ್ಲ ಆ ಮಹಾಸರೋವರದ ದಂಡೆಗೆ ಉತ್ತರಕರ್ನಾಟಕದ ಒಂದು ಕುಟುಂಬವಿತ್ತು ಅಂದಿದ್ದೆ. ಅವರು ಇಲ್ಲಿಗೆ ಇಪ್ಪತ್ತೈದನೆಯ ವಯಸ್ಸಿಗೆ ಬಂದವರು. ಇಬ್ಬರು ಮಕ್ಕಳು. ಇಲ್ಲಿಯೇ ಹುಟ್ಟಿ ಬೆಳೆದು ಒಬ್ಬ ಶಿಕಾಗೋ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕ. ಮತ್ತೊಬ್ಬ ನ್ಯೂಯಾರ್ಕ್‌ನಲ್ಲಿ ವೈದ್ಯ ಅಂತಲೂ ಹೇಳಿದ್ದೆ. ಈಗ ಮನೆಯಲ್ಲಿ ಉಳಿದಿರುವ ಹಿರಿಯರು ಎಪ್ಪತ್ತು ವರ್ಷದ ಚಂದ್ರಶೇಖರ ಮನವಳ್ಳಿ, ಅರವತ್ತೈದರ ಸುಮನಾ ಮನವಳ್ಳಿ. ಇವರೂ ಡಾಕ್ಟರುಗಳೇ. ಸರೋವರದ ಬಳಿ ಅವರು ಕಟ್ಟಿಸಿದ್ದು ಸಿಮೆಂಟಿನ ಮನೆಯಲ್ಲ. ಕನಸಿನ ಲೋಕದ ಗಾಜಿನ ಮನೆ. ಒಳಗೆ ಎಲ್ಲಿ ಕುಳಿತರೂ ಸರೋವರದಲ್ಲಿ ಆಡುವ